StudentBounty.com

**Fourth Semester of Three Years LL.B. Examination, December 2012**
**Optional – II : RIGHT TO INFORMATION (Course – III)**

Duration : 3 Hours Max. Marks : 100

**Instructions** : 1. Answer all **5** questions.
2. Figures to the **right** indicate marks.
3. Answers should be written **either** in **English** or **Kannada completely**.

**UNIT – I**

Q. No. 1. (a) Examine the origin and development of the concept of 'Right to know' in India. Refer to cases. Marks : 15

ಭಾರತದಲ್ಲಿ 'ಅರಿಯುವ ಹಕ್ಕಿನ' ಉಗಮ ಮತ್ತು ಬೆಳವಣಿಗೆಗಳನ್ನು ಪರೀಕ್ಷಿಸಿ. ಪ್ರಕರಣಗಳನ್ನು ಉಲ್ಲೇಖಿಸಿ.

OR/**ಅಥವಾ**

Democracy expects openness and openness is a concomitant of free society – Sunlight is the best disinfectant'. Elucidate.

'ಪ್ರಜಾ ಪ್ರಭುತ್ವವು ಮುಕ್ತತೆಯನ್ನು ಬಯಸುತ್ತದೆ ಮತ್ತು ಮುಕ್ತತೆಯು ಸ್ವತಂತ್ರ ಸಮಾಜದ ಅವಶ್ಯಕತೆ–ಸೂರ್ಯ ಕಿರಣವು ಒಂದು ಉತ್ತಮವಾದ ಸೋಂಕು ನಿವಾರಕ'. ವಿಶದೀಕರಿಸಿ.

(b) Write a note on 'Mazdoor Kissan Shakthi Sanghatan'. Marks : 5

'ಮಜ್ದೂರ್ ಕಿಸಾನ್ ಶಕ್ತಿ ಸಂಘಟನೆ'ಯ ಬಗ್ಗೆ ಟಿಪ್ಪಣಿ ಬರೆಯಿರಿ.

OR/**ಅಥವಾ**

State the reasons for using the term 'Right' rather than 'Freedom' in the right to Information Act, 2005.

ಮಾಹಿತಿ ಹಕ್ಕು ಕಾಯಿದೆ 2005 ರಲ್ಲಿ ಮಾಹಿತಿ ಪಡೆಯುವ 'ಸ್ವಾತಂತ್ರ್ಯ'ಕ್ಕೆ ಬದಲಾಗಿ 'ಹಕ್ಕು' ಎಂಬ ಪದ ಬಳಕೆಗೆ ಕಾರಣಗಳನ್ನು ನೀಡಿ.

**P.T.O.**

www.StudentBounty.com

StudentBounty.com

## UNIT – II

Q. No. 2. (a) What is Right to Information ? Discuss it with the help of interpretation relating to 'Information', 'Record', competent authority and 'Public Authority'. Marks : 15

ಮಾಹಿತಿ ಹಕ್ಕು ಎಂದರೇನು ? ಇದನ್ನು 'ಮಾಹಿತಿ', 'ರೆಕಾರ್ಡ್', 'ಸಕ್ಷಮ ಅಧಿಕಾರಿ' ಮತ್ತು 'ಸಾರ್ವಜನಿಕ ಪ್ರಾಧಿಕಾರ'ಗಳಿಗೆ ಸಂಬಂಧಿಸಿದ ಅರ್ಥ ವಿವರಣೆಯೊಂದಿಗೆ ಚರ್ಚಿಸಿ.

OR/**ಅಥವಾ**

Discuss the role of a public authority to provide information and designation of public information officers.

ಸಾರ್ವಜನಿಕ ಪ್ರಾಧಿಕಾರದ ಮಾಹಿತಿ ಒದಗಿಸುವ ಮತ್ತು ಸಾರ್ವಜನಿಕ ಮಾಹಿತಿ ಅಧಿಕಾರಿಗಳ ನೇಮಕ ಕುರಿತಾದ ಪಾತ್ರವನ್ನು ಚರ್ಚಿಸಿ.

(b) Write a note on 'severability'. Marks : 5

ಬೇರ್ಪಡಿಸುವಿಕೆಯ ಕುರಿತು ಟಿಪ್ಪಣಿ ಬರೆಯಿರಿ.

OR/**ಅಥವಾ**

The applicant is a retired employee of a public authority in an RTI application requested the public authority to supply certified copies of annual confidential reports of himself and his colleagues. Advice the public authority.

ಅರ್ಜಿದಾರನು ಸಾರ್ವಜನಿಕ ಪ್ರಾಧಿಕಾರವೊಂದರ ನಿವೃತ್ತ ಅಧಿಕಾರಿಯಾಗಿದ್ದು ತನ್ನಮತ್ತು ಇತರೆ ಸಹೋದ್ಯೋಗಿಗಳ ವಾರ್ಷಿಕ ಗೌಪ್ಯತಾ ವರದಿಯ ಪ್ರಮಾಣೀಕರಿಸಿದ ಪ್ರತಿಗಳನ್ನು ನೀಡುವಂತೆ ತನ್ನ ಅರ್ಜಿಯಲ್ಲಿ ಕೋರುತ್ತಾನೆ. ಸಾರ್ವಜನಿಕ ಪ್ರಾಧಿಕಾರಕ್ಕೆ ಸಲಹೆ ನೀಡಿ.

## UNIT – III

Q. No. 3. (a) Discuss the powers and functions of information commission. State the qualifications and disqualifications of Information commissioners under the Act. Marks : 15

ಮಾಹಿತಿ ಆಯೋಗದ ಅಧಿಕಾರ ಮತ್ತು ಕರ್ತವ್ಯಗಳನು ಚರ್ಚಿಸಿ. ಕಾಯಿದೆಯನ್ವಯ ಮಾಹಿತಿ ಆಯುಕ್ತರ ಅರ್ಹತೆ ಮತ್ತು ಅನರ್ಹತೆಗಳನ್ನು ತಿಳಿಸಿ.

OR/**ಅಥವಾ**

Discuss the procedure for Appeals and complaints under the Right to Information Act.

ಮಾಹಿತಿ ಹಕ್ಕು ಅಧಿನಿಯಮದಡಿ ದೂರು ಮತ್ತು ಮೇಲ್ಮನವಿಗೆ ಸಂಬಂಧಿಸಿದ ಪ್ರಕ್ರಿಯೆಗಳನ್ನು ಚರ್ಚಿಸಿ.

www.StudentBounty.com

StudentBounty.com

(b) An applicant in his complaint requested the commission to impose penalty on public information officer for non-supply of information within thirty days and also to award damages to him for the loss suffered. Decide. Marks : 5

ಅರ್ಜಿದಾರನೊಬ್ಬನು ಮಾಹಿತಿ ಆಯೋಗಕ್ಕೆ ದೂರೊಂದನ್ನು ಸಲ್ಲಿಸಿ ಸಾರ್ವಜನಿಕ ಮಾಹಿತಿ ಅಧಿಕಾರಿಯು 30 ದಿನಗಳಲ್ಲಿ ಮಾಹಿತಿ ನೀಡಲು ವಿಫಲನಾಗಿದ್ದಕ್ಕೆ ದಂಡವನ್ನು ವಿಧಿಸಬೇಕೆಂದು ಮತ್ತು ತನಗಾದ ನಷ್ಟಕ್ಕಾಗಿ ನಷ್ಟ ಭರ್ತಿಗೆ ಆದೇಶಿಸಲು ಕೋರುತ್ತಾನೆ. ನಿರ್ಧರಿಸಿ.

OR/**ಅಥವಾ**

A public information officer who rejected an RTI application earlier, subsequently appointed as first appellat authority of a department. Can he decide that case as first appellate authority ?

ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿದ್ದಾಗ ಒಬ್ಬ ಅಧಿಕಾರಿಯು ಮಾಹಿತಿ ಅರ್ಜಿಯನ್ನು ತಿರಸ್ಕರಿಸಿರುತ್ತಾನೆ. ತದನಂತರ ಆತನೇ ಮೊದಲನೇ ಮೇಲ್ಮನವಿ ಅಧಿಕಾರಿಯಾಗಿ ನೇಮಕಗೊಳ್ಳುತ್ತಾನೆ. ಆತನು ಮೇಲ್ಮನವಿ ಅಧಿಕಾರಿಯಾಗಿ ಈ ಪ್ರಕರಣವನ್ನು ತೀರ್ಮಾನಿಸಬಹುದೇ ?

**UNIT – IV**

Q. No. 4. (a) Explain the objectives of the Public Records Act, 1993. State the powers and responsibilities of the record officer. Marks : 15

ಸಾರ್ವಜನಿಕ ಅಭಿಲೇಖಗಳ ಅಧಿನಿಯಮ 1993ರ ಉದ್ದೇಶಗಳನ್ನು ವಿವರಿಸಿ. ಅಭಿಲೇಖನಾಧಿಕಾರಿಗಳ ಅಧಿಕಾರ ಮತ್ತು ಜವಾಬ್ದಾರಿಗಳನ್ನು ತಿಳಿಸಿ.

OR/**ಅಥವಾ**

Discuss the salient features of Official Secrets Act, 1923. What is its status after RTI Act, 2005 ?

ಅಧಿಕಾರ ಗೌಪ್ಯತಾ ಕಾಯಿದೆ 1923ರ ಪ್ರಮುಖ ಲಕ್ಷಣಗಳನ್ನು ಚರ್ಚಿಸಿ. ಮಾಹಿತಿ ಹಕ್ಕು ಕಾಯಿದೆ 2005 ರ ನಂತರ ಇದರ ಸ್ಥಾನವೇನು ?

(b) State briefly the powers and responsibilities of the Inquiry commission under the Commission of Inquiry Act, 1952. Marks : 5

ವಿಚಾರಣಾ ಆಯೋಗದ ಅಧಿನಿಯಮ, 1952 ರಂತೆ ವಿಚಾರಣಾ ಆಯೋಗದ ಅಧಿಕಾರ ಮತ್ತು ಹೊಣೆಗಾರಿಕೆಗಳನ್ನು ಸಂಕ್ಷಿಪ್ತವಾಗಿ ತಿಳಿಸಿ.

OR/**ಅಥವಾ**

Write a note on “Freedom of Information Act, 2002”.

‘‘ಮಾಹಿತಿ ಸ್ವಾತಂತ್ರ್ಯ ಕಾಯಿದೆ, 2002” ರ ಬಗ್ಗೆ ಟಿಪ್ಪಣಿ ಬರೆಯಿರಿ.

www.StudentBounty.com

## UNIT – V

Q. No. 5. (a) Examine the best practices adopted by the Government and public authorities for the effective implementation of the RTI Act. Marks : 15

ಮಾಹಿತಿ ಹಕ್ಕು ಅಧಿನಿಯಮದ ಪರಿಣಾಮಕಾರಿ ಜಾರಿಗಾಗಿ ಸರ್ಕಾರ ಮತ್ತು ಸಾರ್ವಜನಿಕ ಪ್ರಾಧಿಕಾರಗಳು ಅಳವಡಿಸಿಕೊಂಡಿರುವ ಉತ್ತಮ ಕಾರ್ಯ ಪದ್ಧತಿಗಳನ್ನು ಪರೀಕ್ಷಿಸಿ.

OR/**ಅಥವಾ**

Discuss some of the leading cases of the central information commission on BSNL, Income Tax and Central Excise departments.

ಬಿ.ಎಸ್.ಎನ್.ಎಲ್., ಆದಾಯ ತೆರಿಗೆ ಇಲಾಖೆ ಮತ್ತು ಕೇಂದ್ರೀಯ ಅಬಕಾರಿ ಇಲಾಖೆಗೆ ಸಂಬಂಧಿಸಿದಂತೆ ಕೇಂದ್ರ ಮಾಹಿತಿ ಆಯೋಗವು ನೀಡಿರುವ ಕೆಲವು ಪ್ರಮುಖ ತೀರ್ಪುಗಳನ್ನು ಚರ್ಚಿಸಿ.

(b) Write a note on the role of media and RTI Act. Marks : 5

ಮಾಹಿತಿ ಹಕ್ಕು ಮತ್ತು ಸಮೂಹ ಮಾಧ್ಯಮಗಳ ಪಾತ್ರ ಕುರಿತಂತೆ ಟಿಪ್ಪಣಿ ಬರೆಯಿರಿ.

OR/**ಅಥವಾ**

An RTI activist was murdered for filing an RTI application to seek informations regarding correct activities in a department. Can information commission order for disclosure of all the informations bought by the activist ?

ಇಲಾಖೆಯೊಂದರ ಭ್ರಷ್ಟಾಚಾರದ ವಿವರಗಳನ್ನು ನೀಡುವಂತೆ ಮಾಹಿತಿ ಹಕ್ಕು ಕಾರ್ಯಕರ್ತರೊಬ್ಬರು ಮಾಹಿತಿಗಾಗಿ ಅರ್ಜಿಯನ್ನು ಸಲ್ಲಿಸಿದ ಕಾರಣಕ್ಕಾಗಿ ಕೊಲೆಯಾಗುತ್ತಾರೆ. ಇಂತಹ ಸಂದರ್ಭದಲ್ಲಿ ಮಾಹಿತಿ ಆಯೋಗವು ಆ ಕಾರ್ಯಕರ್ತರು ಕೇಳಿದ್ದ ಎಲ್ಲಾ ವಿವರಗಳನ್ನು ನೀಡುವಂತೆ ಆದೇಶಿಸಬಹುದೇ ?

---

StudentBounty.com
www.StudentBounty.com